ಮಾಡಿಲ್ಲ'' ಎಂದರು. ''ನನಗೆ ತೋಚಿದಷ್ಟು ಹಾಕ್ಲಾ ಅಥವಾ ನೀವೇ ಹೇಳ್ತೀರಾ?'' ಎಂದೆ. ಆತ ಜೋರಾಗಿ ನಕ್ಕರು. ನಾವಿಬ್ಬರು ಆಗಾಗ ಹೀಗೆಯೇ ಪರಸ್ಪರ ಕಾಲೆಳೆದುಕೊಳ್ಳುವುದುಂಟು. ಇಬ್ಬರೂ ಕಂಪನಿಯಲ್ಲಿ ಅದೆಷ್ಟು ಹಳೆಯ ಅಪರಾಧಿಗಳು! ಈಗ ಹೇಳ್ತೇನೆ ಎಂದವರೇ ಯಾವಾಗಿನ ಹಾಗೆ ಐನೂರು ಕಡಿಮೆ ಮಾಡು ಎಂದು ಹೇಳಿದ್ದರು. ಇಷ್ಟು ವರ್ಷದಿಂದಲೂ ನಮ್ಮಲ್ಲಿ ಅದು ಅಲಿಖಿತ ನಿಯಮ. ಸಂಬಳದ ಚರ್ಚೆ ಇಲ್ಲದ ತಳಸ್ತರದ ನೌಕರಿಗಳಿಗೆ ಹೊಸದಾಗಿ ಬಂದವರಿಗೆ ಮುಂಚೆ ಇದ್ದವನಿಗಿಂತ ಐನೂರು ಕಡಿಮೆ ನಿಗದಿಯಾಗುತ್ತದೆ. ಎರಡು ಮೂರು ವರ್ಷಗಳಲ್ಲಿ ಆತ ನಮ್ಮ ಕಂಪನಿಗೆ ಹೊಂದಿಕೊಂಡಾಗ, ಕಂಪ್ಲೇಂಟ್ ಬರದ ಹಾಗೆ ಕೆಲಸ ಒಪ್ಪಿಸುತ್ತ ಬಂದಾಗ ಒಂದೆರಡು ಇಂಕ್ರಿಮೆಂಟುಗಳನ್ನು ಪಡೆದು ಹಿಂದಿನವನಷ್ಟೇ ಸಂಬಳಕ್ಕೆ ಅರ್ಹನಾಗುತ್ತಾನೆ ಎನ್ನುವುದು ಆ ಸೂತ್ರದ ಆಧಾರ. ಮೊದಲೇ ನನ್ನ ಸ್ವಭಾವದ ಪರಿಚಯವಾಗಿದ್ದ ಕಾರಣವೋ ಏನೋ... ಭೀಮಸೇನ ಐನೂರು ಕಡಿಮೆ ಯಾಕೆ ಎಂದು ಕೇಳಲು ಬರಲಿಲ್ಲ.

ದಿನಗಳು ಎಂದಿನಂತೆ ಸವೆದು ಹೋಗುತ್ತಿದ್ದವು. ಭೀಮಸೇನ ಮ್ಯಾನೇಜರರ ಕ್ಯಾಂಡಿಡೇಟು ಎಂದು ಸರ್ವೇ ಸಾಧಾರಣ ಎಲ್ಲ ನೌಕರರಿಗೂ ಗೊತ್ತಿತ್ತು. ಆದ್ದರಿಂದ ಅವನೊಡನೆ ಎಲ್ಲರೂ ಸ್ವಲ್ಪ ಹೆಚ್ಚೇ ಎಚ್ಚರ ಮತ್ತು ಗೌರವದಿಂದ ನಡೆದುಕೊಳ್ಳುತ್ತಿದ್ದರು. ಮೂರ್ನಾಲ್ಕು ತಿಂಗಳುಗಳಲ್ಲಿ ಭೀಮಸೇನ ಮ್ಯಾನೇಜರರ ಪರವಾಗಿ ಗೂಢಚರ್ಯೆ ನಡೆಸುತ್ತಿದ್ದಾನೆ ಎಂಬ ಗುಸುಗುಸು ಸುದ್ದಿ ಹುಟ್ಟಿಕೊಂಡಿತು. ಪರ್ಚೇಸರ್ ಮುಕುಂದ ಒಂದು ದಿನ ನನ್ನ ಕ್ಯಾಬಿನ್ನಿಗೆ ನುಗ್ಗಿ, ''ಸಂದರ್ಶನದಲ್ಲಿ ನೀವು ಸ್ವಲ್ಪ ಜಾಗ್ರತೆ ಮಾಡಿದ್ದರೆ ಇಂತಹ ಆಪತ್ತನ್ನು ಒಳಗೆ ಬರದಂತೆ ಮಾಡಬಹುದಿತ್ತು'' ಎಂದು ನೇರವಾಗಿ ನನ್ನನ್ನೇ ದೂರಿದ್ದ. ನಿಜವಾಗಿಯೂ ಭೀಮಸೇನ ಗೂಢಚರ್ಯೆ ಮಾಡುತ್ತಿದ್ದಾನೋ ಅಥವಾ ಸಪ್ಲಾಯರುಗಳಿಂದ ಅಲ್ಪಸ್ವಲ್ಪ ಮೇಲ್ಕಾಸು ಸಂಪಾದಿಸುತ್ತ ಸುಖವಾಗಿದ್ದ ಮುಕುಂದನಿಗೆ ಈಗ ಭೀತಿ ಆವರಿಸಿಕೊಂಡಿತ್ತೋ ಎಂದು ನಿರ್ಧರಿಸಲಾಗದೆ ಸುಮ್ಮನಿದ್ದೆ ನಾನು. ಮುಂದಿನ ಕೆಲವು ತಿಂಗಳುಗಳಲ್ಲಿ ಮುಕುಂದನಲ್ಲದೆ ಬೇರೆ ಕೆಲವರೂ ಸಂಶಯ ವ್ಯಕ್ತಪಡಿಸಿದ್ದರಿಂದ ಸಮಸ್ಯೆ ಬಿಗಡಾಯಿಸುವ ಮೊದಲೇ ಇದರ ಸತ್ಯಾಸತ್ಯತೆಯನ್ನು ಪತ್ತೆ ಹಚ್ಚುವುದು ನನಗೆ ಅನಿವಾರ್ಯವಾಗಿತ್ತು.

ಶಂಕಿತ ಗೂಢಚಾರನ ಮೇಲೆ ಗೂಢಚರ್ಯೆಗೆ ತೊಡಗುವ ಮೊದಲು ಭೀಮಸೇನನೊಂದಿಗೆ ಮಾತುಕತೆ ಬೆಳೆಸಿ ಪರಿಚಯ ಮಾಡಿಕೊಳ್ಳೋಣ ಅನಿಸಿತ್ತು. ಚಹಾ ತರುವಾಗ, ''ರೂಮು ಸಿಕ್ಕಿತಾ, ಊಟಕ್ಕೆ ಏನು ಮಾಡುತ್ತೀ, ರಜೆಯದಿನ ಏನು ಮಾಡುತ್ತೀ'' ಇತ್ಯಾದಿ ಸಾಮಾನ್ಯ ಪ್ರಶ್ನೆಗಳನ್ನು ಕೇಳಿದ್ದೆ. ಕೇಳಿದಷ್ಟಕ್ಕೆ ಒಂದೆರಡು ಶಬ್ದಗಳಲ್ಲಿ ಉತ್ತರಿಸುತ್ತಿದ್ದ. ಸ್ವಲ್ಪದಿನಗಳಲ್ಲಿ ಮುಂದಿನ ಹಂತದ ಪ್ರಶ್ನೆಗಳಾದ, ''ಮದುವೆಯಾಗಿದೆಯಾ, ಮನೆಯಲ್ಲಿ ಯಾರ್‍ಯಾರಿದ್ದಾರೆ?'' ಇಂತಹ ಪ್ರಶ್ನೆಗಳನ್ನು ಕೂಡ ಕೇಳಿದ್ದೆ. ಆತ ಕೇಳಿದ ಪ್ರಶ್ನೆಗಷ್ಟೇ ಉತ್ತರ ಹೇಳುತ್ತಿದ್ದುದರಿಂದ ಆತನ ಬಗ್ಗೆ ತಿಳಿದದ್ದು ಬಹಳ ಕಡಿಮೆ. ಹೆಂಡತಿ ರಾಂಚಿಯಲ್ಲಿದ್ದಾಳೆ ಎಂದಿದ್ದ, ಅಪ್ಪಅಮ್ಮ, ಅಣ್ಣತಂಗಿ ಎಲ್ಲ ಇರುವ ತುಂಬು ಬಿಹಾರಿ ಸಂಸಾರ ತನ್ನದು ಎಂದಿದ್ದ. ಈಗ ಇಲ್ಲಿ ಬಂದು ಮೂರು ವರ್ಷವಾಯಿತು, ಊರಿಗೆ ಹೋಗಿಲ್ಲ ಎಂದಿದ್ದ. ಗಲ್ಫ್ ನೌಕರಿಯ ಹಣೆಬರಹವವೇ ಇಷ್ಟು. ಯಾವಾಗಲೂ ಹಣದ ಬಿಕ್ಕಟ್ಟು. ಎಲ್ಲ ಸಮಸ್ಯೆಗಳನ್ನು ಈಸಿ ಜೈಸುವುದರಲ್ಲಿ ತಾನು ಮಾತ್ರ ಅಲ್ಲ, ಹೆಂಡತಿ, ಮಕ್ಕಳು ಕೂಡ ಬಲಿಪಶುಗಳು ಎಂದಿದ್ದ. ಅವನೊಂದಿಗಿನ ಮಾತುಕತೆಯಲ್ಲಿ ನನಗೆ ಹೊಸದೇನೂ ಕಂಡುಬಂದಿರಲಿಲ್ಲ.

ಭೀಮಸೇನನ ಬಗ್ಗೆ ಇನ್ನಷ್ಟು ಹೇಳಿದ್ದು ಲಿಗೋ ಎಂಬ ನಮ್ಮ ಸೀನಿಯರ್ ಸೇಲ್ಸ್‌ಮ್ಯಾನ್. ಲಿಗೋನಿಗೆ ಒಳ್ಳೆಯ ವೇತನ ಇದ್ದರೂ ಯಾವಾಗಲೂ ಹಣದ ದರ್ದು. ಕೊಡುವ ಎಲ್ಲ ಬ್ಯಾಂಕಿನಲ್ಲೂ ಸಾಲ ಪಡೆದಿದ್ದ, ಗೆಳೆಯರಿಂದ ಕೈಸಾಲ, ಕಂಪನಿ ತುರ್ತು ಕಾರಣಗಳಿಗೆ ಕೊಡುವ ಅಡ್ವಾನ್ಸು – ಎಲ್ಲವನ್ನೂ ಪಡೆದು ಮುಗಿಸಿದ್ದ. ಅಷ್ಟು ಹಣ ಏನು ಮಾಡುತ್ತೀಯೋ ಮಹರಾಯಾ